WORKS ARE UNDER INVESTIGATION IN HANUR FIRKA ... 6

1	New Tank across Hebballa near Arepalyam	3.00	750 Acres
2	New Tank across Managalli halla near Bandalli	24.00	1200 –,,–
3	New Tank across Barlakabbehalla	3.00	156 –,,–
4	New Tank across Uppauhalla		
5	New Tank near Dinnehalli–appd.	14.05	514 –,,–
6	Motakanadoddihalla near Konagalli		

ಶ್ರೀ ಜಿ. ರಾಜೂಗೌಡ.—ಸ್ವಾಮಿ, ನನ್ನ (ಬಿ) ಪ್ರಶ್ನೆಯಲ್ಲಿ ನನ್ನ ಕ್ಷೇತ್ರದಲ್ಲಿ ಎಲ್ಲೆಲ್ಲಿ ಸಣ್ಣ ನೀರಾವರಿ ಯೋಜನೆಗೆ ಒಳಪಡುವ ಕೆರೆಗಳು, ಏತನೀರಾವರಿಗೆ ಒಳಪಡುವ ಯೋಜನೆಗಳು ಸಾಧ್ಯ ಇವೆ ಎಂಬುದರ ಬಗ್ಗೆ ಮಾಹಿತಿಗಳನ್ನೊಳಗೊಂಡ ಒಂದು ಕೈಪಿಡಿಯನ್ನು ಹೊರಡಿಸುವುದಕ್ಕೆ ಸರ್ಕಾರವು ಉದ್ದೇಶಿಸಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಅರ್ಹತೆ ಪಡೆದಿರತಕ್ಕಂಥ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದವರ ನೀತಿ ಏನು ತಿಳಿಸುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ಸಣ್ಣ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಡಬೇಕೆಂಬುದೇ ಸರ್ಕಾರದ ನೀತಿ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಈ ವಿಚಾರದಲ್ಲಿ ಸಮಗ್ರವಾಗಿ ತನಿಖೆ ಮಾಡಿ ಎಲ್ಲೆಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯ ಇದೆ ಎಂಬುದನ್ನು ಗುರುತಿಸಬಹುದು. ಅಂತಹ ಅರ್ಹತೆ ಪಡೆದಂಥ ಕ್ಷೇತ್ರಗಳಲ್ಲಿ ಈ ಸಣ್ಣ ನೀರಾವರಿ ಯೋಜನೆಗಳನ್ನು ಹಾಕಿಕೊಂಡು ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬುದು ಸರ್ಕಾರದ ನೀತಿಯಾಗಿದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸಿ ಇಂತಿಂತಹ ಕ್ಷೇತ್ರಗಳಲ್ಲಿ ಈ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI M. M. J. SYDYOJATHA.—I will examine it.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ತಾವು ಈ ಸಣ್ಣ ನೀರಾವರಿ ಯೋಜನೆಗಳಿಗಾಗಿ ೧೯೮೦–೮೧ನೇ ಸಾಲಿಗೆ ಎಷ್ಟು ಹಣವನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ಎಂ ಎಂ. ಜೆ. ಸದ್ಯೋಜಾತ.—೧೩.೫೫ ಲಕ್ಷ ರೂಪಾಯಿಗಳು.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ನಮ್ಮ ಕಡೆ ತುಂಬಾ ಮಳೆ ಬಿದ್ದಾಗ ನೀರು ಅನೇಕ ಓಣಿಗಳಲ್ಲಿ ಮತ್ತು ಕಾಲುವೆಗಳಲ್ಲಿ ಯಥೇಚ್ಛವಾಗಿ ಅಡೆತಡೆಯಿಲ್ಲದೆ ಕೆರೆಗೋ ನದಿಗೋ ಸಮುದ್ರಕ್ಕೋ ಹರಿದು ಹೋಗತಕ್ಕಂಥ ಸಂದರ್ಭಗಳು ಇವೆ. ಇಂತಹ ಓಣಿಗಳು ಎಲ್ಲೆಲ್ಲಿ ಇದೆಯೋ ಅಲ್ಲಿ ಕಲ್ಲಿನ ಒಡ್ಡುಗಳನ್ನು ನಿರ್ಮಾಣ ಮಾಡಿ ನೀರು ಅಲ್ಲಿ ನಿಲ್ಲುವಂತೆ ಮಾಡಿದರೆ ಸುತ್ತಮುತ್ತಲಿನ ನೀರಿನ ಭಾವಿಗಳಿಗೆ ನೀರನ್ನು ಕೊಡುವುದಕ್ಕಾಗುತ್ತದೆ. ಇದನ್ನು ಕಡಿಮೆ ಖರ್ಚಿನಲ್ಲಿ ಮಾಡುವುದಕ್ಕೆ ಬರುತ್ತದೆ ಈ ಕೆಲಸವನ್ನು ತಾವು ಮಾಡಬೇಕು. ಇದಕ್ಕೆ ಏನು ಉತ್ತರ ಕೊಡುತ್ತೀರಿ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದನ್ನು ಪರಿಶೀಲನೆ ಮಾಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಎಸ್ ಎಸ್. ಅರಿಕೇರಿಯವರೇ, ನಿಮ್ಮ ಕೊಶ್ಚನ್ ಅನ್ನು ಹೆಲ್ಡ್ ಓವರ್ ಮಾಡಿದ್ದೇನೆ.

Follow up action in respect of reservations to the Back ward Class Communities

479 SRI PRABHAKAR TELKAR (Chithapur).—Will the Chief Minister be pleased to state.—

(a) whether the Government is implementing the G.O.No. DPAR 1 SBC 77 dated 4th March 1977 giving reservations to the Backward Class Communities etc., while appointing candidates, effectively :

(b) the measures that the Government have taken so far to ensure that required representation to the various communities belonging to the Backward Classes is being given while recruiting candidates for various posts ;

(c) whether the aforesaid Govt. Order is being implemented in all corporate bodies, Boards, Local Boards, Municipalities and other autonomous Institutions ;

(d) whether the G. O is also implemented in respect of appointments in private institutions, schools, colleges and other industrial establishments ?

SRI R. GUNDU RAO (Chief Minister).—

(a) Yes.

(b) (1) An employment cell in the Directorate of Social Welfare has been created to inspect the unit offices and to check up whether the Government orders relating to reservation in service have been/are being followed and implemented. Heads of Departments and other inspecting authorities have been directed to verify, while inspecting offices, whether classification of vacancies and reservations have been done, according to Government orders issued from time to time and to take appropriate action if any lapses are noticed.

(2) The Secretaries to Government have been instructed to obtain compliance report from the Field Officers of the Departments under their administrative control and to send consolidated report to the Cabinet Section so that the position could be brought to the notice of the Cabinet

(3) The Secretaries to Government have also been instructed to obtain quarterly returns from the Heads of Departments and Field Departments, in respect of promotions made by them and get them reviewed by the Departmental Promotions Committees constituted for the purpose of promotions to Class II or Class I Junior Scale Posts in the Department.

(4) Strict instructions from time to time to the Secretaries to Government and Heads of the Departments have been issued to imple-

ment the Government orders regarding reservation in favour of persons belonging to Scheduled Castes/Scheduled Tribes scrupulously at all levels.

(c) Yes. The Government order is being implemented in Government Companies, Statutory Boards, Corporations etc., whether full or partly owned by Government as also in the Educational institutions receiving Government Aid except the educational institutions established and managed by minorities based on religion or language.

(d) No.

SRI PRABHAKAR TELKAR.—From the reply to my question, it seems that the Government Order in respect of reservations to the Backward Classes and Communities is being implemented. But there are several departments of the Government as well as the Corporations wherein it is not at all being implemented. In the departments like Karnataka Electricity Board, and other Public Undertakings, they are not providing any reservations to these backward class people. There is no representative from the backward class communities in the Sub-recruitment Committees to ensure selection of these people. Similar situation prevails in respect of recruitment of Sub-Inspectors and in Judicial Department. Will the Government be pleased to implement the order strictly to accommodate these backward class people in these departments ?

† SRI R. GUNDU RAO.–The Government is equally eager to implement the reservation order which has already been issued. So far as the Recruitment Committees are concerned, of course, the Director for Social Welfare is always there to take care of the interests of the Backward Class/Communities and wherever Official Recruitment Committees are there, the Director of Scheduled Caste and Scheduled Tribes will take care of it. Wherever Non-Official Recruitment Committees are there, the Government will always see that a representative from backward class community or minority community or from SC/ST community will be there as far as possible. Regarding the delay or non-implementation of Government directive, the Government has issued various circulars and there is a Cell in each Department to lookafter whether the directives of the Government are properly implemented or not. If not implemented what are the reasons, whether the candidates were available or not according to their prescribed rules etc., all these things will be looked into

Sir, regarding the Corporations, I quite agree with my learned friend and others like Sri Arumugham, who spoke about the Electricity

† Indicates that remarks or speeches have not been revised by the member concerned.

Department and Road Transport Corporation in the last debate. There are other Corporations also where the required percentage of reservation in the employment to these SCs/STs/BCs has not been provided. The reasons stated by them were non-availability of candidates and the concerned rules did not permit them to fill up certain categories of officer posts where they had to fulfil certain conditions.
If any specific instance of delay on the part of the Government or Heads of Departments, is brought to the notice of the Government, we will look into it and it will be rectified.

SRI PRABHAKAR TELKAR.—I am happy, the Hon. Chief Minister is taking much interset, but what I would like to submit is, in the Corporation which I have just mentioned no drastic steps are being taken, to accomodate these people. There is no dearth of hands in these backward classes. Therefore, strict vigilance should be kepton the circular that has now been issued and it should be very seriously implemented; that is my submission. Also, I request the Hon. Chief Minister to instruct the concerned officers to see that the backward and STs/SCs are appointed according to the 1977 Order.

SRI R. GUNDU RAO —I made it clear and I am very much concerned about it and wherever injustice has been done, I will lo ok it it and proper instructions will be given to the concerned Heads of Departments and officers. Even if any Member of this House, brings to my notice the deliberate violation of the Order, action will be taken.

ಶ್ರೀ ವಿ.ವಿ. ಪತ್ತಾರ್.— ಮಾನ್ಯ ಅಧ್ಯಕ್ಷರೆ, ನಿಮ್ಮ ವರ್ಗದ ಮಿಾಸಲಾತಿಯ ಬಗ್ಗೆ ನಮ್ಮ ನಾಯಕರಾದ ಮುಖ್ಯ ಮಂತ್ರಿಗಳು ಒಂದು ಸಮಿತಿಯನ್ನು ಮಾಡಿದ್ದಾರೆ. ಹೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಹೆಡ್ಯೂಲ್ಡ್ ಟ್ರೈಬ್‌ನವರಿಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ನೌಕರಿಗಳು ಸರಿಯಾಗಿ ದೊರಕುತ್ತದೋ ಇಲ್ಲವೋ ಅಥವಾ ರಿಸರ್ವೇಷನ್ ಸಾಕಷ್ಟು ಸರಿಯಾಗಿ ಸಿಕ್ಕುತ್ತದೋ ಇಲ್ಲವೊ ಎನ್ನುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಬಹುಶಃ ಹಿಂದುಳಿದ ಜನಾಂಗಕ್ಕೂ ಸಹಿತ ಆಂಧ್ರಾದ್ದೇ ಒಂದು ಸಮಿತಿಯನ್ನು ನೇಮಕ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಈ ಒಂದು ಸಮಿತಿಯನ್ನು ನೇಮಕ ಮಾಡಿದ್ದೇ ಆದರೆ ಹಿಂದುಳಿದ ಜನಾಂಗಕ್ಕೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ರಿಜರ್ವೇಷನ್ ಅಮಲಿನಲ್ಲಿ ದೊರಕುತ್ತದೆ ಎಂದು ನನ್ನ ಭಾವನೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿ ಕೊಳ್ಳುವುದೇನಂದರೆ, ನಿಮ್ಮವರ್ಗದವರಿಗೆ ಸಮಿತಿಯನ್ನು ಮಾಡಿ ಹೊಸ ಹೆಜ್ಜೆಯನ್ನು ಇಟ್ಟಿದ್ದೀರಿ. ಅದೇ ರೀತಿ ಹಿಂದುಳಿದ ಜನಾಂಗಕ್ಕೆ ಮೇಲ್ಕಟ್ಟದ ಸಮಿತಿಯನ್ನು ನೇಮಕ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೆ, ಮೊದಲನೇ ಬಾರಿಗೆ ಬಹಳ ವರ್ಷಗಳಿಂದ ಏನು ಅನ್ಯಾಯವಾಗಿದೆ ಅವರಿಗೋಸ್ಕರ ಸಮಿತಿಯನ್ನು ನೇಮಕ ಮಾಡಿರುವುದಾದ್ದಿದೆ. ಪರಿಶಿಷ್ಟ ವರ್ಗದ ಹೆಡ್ಯೂಲ್ ಕ್ಯಾಸ್ಟ್ ಮತ್ತು ಹೆಡ್ಯೂಲ್ ಟ್ರೈಬ್ಸ್‌ಗೆ ಬಹಳ ವರ್ಷಗಳಿಂದ ಏನು ಅನ್ಯಾಯವಾಗುತ್ತಿತ್ತು, ಅದನ್ನು ಸರಿಪಡಿಸಬೇಕು ಎಂದು ಮಾಡಿದ್ದೇವೆ. The Committee itself can look after all these things, but if the hon. Member wants one more Committee to look after the interest of backward classes, I have no objection I fully agree with the hon Member. Atleast if a Committee is consti-

tuted, they will bring to the notice of the Government the lapses of the Departments.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಈ ಸಮಸ್ಯೆ ಬಹಳ ತೀವ್ರವಾಗಿದೆ. ಈ ಉದ್ಯೋಗ ಮಾಡುವಂಥ ಹಲವಾರು ಜನರನ್ನು ಹಿಂದುಳಿದವರು ಎಂದು ಪರಿಗಣಿಸಲಾಗಿದೆ. ಉದಾಹರಣೆ ಕೊಡುವುದಾದರೆ ನೇಕಾರರು, ಜೇಡರು, ಕುಂಬಾರರು, ಅಗಸರು ಇತ್ಯಾದಿ ಜನರನ್ನು ಹಿಂದುಳಿದ ವರ್ಗದವರು ಎಂದು ಪರಿಗಣಿಸಲಾಗಿದೆ. ಆದರೆ ಮೂಲತಃ ಲಿಂಗಾಯಿತ ಸಮಾಜದವರು ಏನಿದ್ದಾರೆ ಅವರನ್ನು ಪಟ್ಟಿಯಲ್ಲಿ ಲಿಂಗಾಯಿತರು ಎಂದು ಕಾಣಿಸಿದ್ದಾರೆ. ಆದುದರಿಂದ ಅವರಿಗೆ ಬ್ಯಾಕ್‌ವರ್ಡ್ ಕ್ಲಾಸ್ ಸರ್ಟಿಫಿಕೇಟ್ ಸಿಕ್ಕುವುದಿಲ್ಲ. ಲಿಂಗಾಯಿತರಲ್ಲಿ ನೇಕಾರರು ಇದ್ದರೂ ಸಹಿತ ಸರ್ಟಿಫಿಕೇಟ್ ಕೊಡುವುದಿಲ್ಲ ಎನ್ನುವಂಥ ಭಾವನೆ ಉತ್ತರ ಕರ್ನಾಟಕದಲ್ಲಿ ಬಂದಿದೆ. ಲಿಂಗಾಯತರು ಏನಿದ್ದಾರೆ ಅವರಿಗೆ ಕೊಡಬಾರದು ಎಂದು ಸರ್ಕಾರ ಒಂದು ಸರ್ಕ್ಯುಲರ್ ಹೊರಡಿಸಿದೆ. ಆದ್ದರಿಂದ ಇದನ್ನು ತಿದ್ದುಪಡಿ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ನಾನು ಈಗಲೇ ನೇರವಾಗಿ ಹೇಳಲಿಕ್ಕೆ ಬರುವುದಿಲ್ಲ. ಲಿಂಗಾಯಿತರಲ್ಲಿ ಯಾರೂ ನಿಜವಾದ ಲಿಂಗಾಯಿತರು ಎಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಪತ್ತಾರ್‌ರವರು ಆಚಾರರು ಎಂದು ಹೇಳುತ್ತಾರೆ, ಅವರಲ್ಲೂ ಲಿಂಗಾಯಿತರು ಇದ್ದಾರೆಂದು ಹೇಳುತ್ತಾರೆ. ಬೇಕಾದರೆ ನಾನು ನ್ಯಾಯಾಂಗ ಇಲಾಖೆಯಿಂದ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಲಿಂಗಾಯಿತರಲ್ಲಿ ಎಲ್ಲಾ ಕಸುಬು ಮಾಡತಕ್ಕವರು ಇದ್ದಾರೆ; ನೇಕಾರರಿದ್ದಾರೆ, ಶಿಲ್ಪಿಗಳಿದ್ದಾರೆ, ಕುಂಬಾರರು ಇದ್ದಾರೆ, ನಮ್ಮ ಸಮಾಜದಲ್ಲಿ ಏನೇನು ಕಸುಬುಗಳಿವೆ ಆ ಎಲ್ಲಾ ಕಸುಬುಗಳನ್ನು ಮಾಡತಕ್ಕವರು ಲಿಂಗಾಯಿತರಲ್ಲಿದ್ದಾರೆ, ಅಗಸರು ಬ್ಯಾಕ್‌ವರ್ಡ್ ಅಂದರೆ ಅಕ್ಕಸಾಲಿಗರು, ಕುಂಬಾರರು ಲಿಂಗಾಯಿತರಲ್ಲಿ ಹೆಚ್ಚು ಇದ್ದಾರೆ. ಅವರು ಕಮ್ಮಾರ ಕೆಲಸ, ಶಿಲ್ಪಿ ಕೆಲಸ ಮಾಡುತ್ತಾರೆ. ಅವರಿಗೆ ಸರ್ಕಾರ ಕೊಟ್ಟಂಥ ಸೌಕರ್ಯವನ್ನು ಪಡೆಯಲಿಕ್ಕೆ ಆತಂಕವಾಗಿದೆ. ಆದ್ದರಿಂದ ಇದನ್ನು ಎಗ್ಸಾಮಿನ್ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಬೊಮ್ಮಾಯಿಯವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಪರ್ಸೆಂಟೇಜ್ ಜಾಸ್ತಿಯಾಗಬೇಕು, ಜನಸಂಖ್ಯೆ ಜಾಸ್ತಿಯಾಗಬೇಕು ಎಂದು ಲಿಂಗಾಯಿತರು ಎಂದು ಸೇರಿಸಿದ್ದಾರೆ. ನಮಗೆ ಬಂದಿರುವ ಕಷ್ಟ ಏನೆಂದರೆ, ಈ ರಾಜ್ಯದಲ್ಲಿ ಲಿಂಗಾಯಿತರು ೩೫ ಪರ್ಸೆಂಟ್ ಇದ್ದಾರೆ. ಅದರಲ್ಲಿ ಕುಂಬಾರರು, ಶಿಲ್ಪಿಗಳು ಅಗಸರು ಎಲ್ಲರೂ ಬಂದರು. ಇದರ ಬಗ್ಗೆ ಪೂರ್ತಿಯಾಗಿ ವಿಚಾರ ಮಾಡಬೇಕಾದರೆ, ಇವರೆಲ್ಲಾ ಲಿಂಗಾಯಿತ ಸಮಾಜದವರಲ್ಲ ಎಂದು ತೀರ್ಮಾನ ಮಾಡಬೇಕು. ಕಾನೂನು ಪ್ರಕಾರ, ನೀವು ಸ್ಥಳದಲ್ಲಿ ಇದ್ದೀರಿ, ಸೌಲಭ್ಯ ಕೊಡುವುದಕ್ಕೆ ಕಷ್ಟ. ನಮ್ಮ ಪತ್ತಾರ್‌ರವರು ಸರ್ಟಿಫಿಕೇಟ್ ಅವರಿಗೆ ಕೊಡುವುದಿಲ್ಲ ಎನ್ನತಕ್ಕ ಭಾವನೆ ಬಂದಿದೆ ಎಂದು ಹೇಳಿದರು. ಅವರು ಅದನ್ನು ಬದಲಾಯಿಸಿಕೊಂಡು ಬ್ರಾಕೆಟ್‌ನಲ್ಲಿ ಹಾಕಿಕೊಳ್ಳಬೇಕು. ಮಾನ್ಯ ಪತ್ತಾರ್‌ರವರು ನಾನು ಅಕ್ಕಸಾಲಿಗ, ಲಿಂಗಾಯಿತ ಆಲ್ಲ ಎಂದು ಬರೆದುಕೊಳ್ಳಬೇಕು. ಲಿಂಗ ಕಟ್ಟಿದರೂ ಬ್ಯಾಕ್‌ವರ್ಡ್ ಜನಾಂಗಕ್ಕೆ ಸೇರಿದ್ದೇನೆ ಎಂದು ಹೇಳಬೇಕು, Generally the officers and the authorities who differentiate the backward and forward communities, will say that you are lingayat and you are a forward community. We cannot blame them unless the entire system is changed. It can be examined in detail and we can find out some formula.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಡಗರು, ಅಕ್ಕಸಾಲಿಗಳು, ಕಮ್ಮಾರರು ಲಿಂಗಾಯಿತರಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಹಿಂದೂಗಳಲ್ಲಿ ಕೆಲವು ಕಸುಬುಗಳಲ್ಲಿ ಹಿಂದುತ್ವ ಬಿಡುವುದಕ್ಕಾಗುವುದಿಲ್ಲ. ಉದ್ಯೋಗದ ಮೇಲಿಂದ, ಉತ್ಪನ್ನದ ಮೇಲಿಂದ, ಸಮಾಜದ ಮೇಲಿಂದ ನಿರ್ಣಯ ಮಾಡಿದ್ದೀರಿ ತಾವು ಮುಖ್ಯ ಮಂತ್ರಿಗಳಾದ ಮೇಲೆ ಆಶ್ವಾಸನೆ ಕೊಟ್ಟಿದ್ದೀರಿ. ಹಾವನೂರ್ ವರದಿ ಬಗ್ಗೆ ಪುನರಾಲೋಚನೆ ಮಾಡಿ ನಿಜವಾಗಿ ಯಾರು

ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಸೌಲತ್ತುಗಳನ್ನು ಕೊಡುವ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಹೇಳಿದ್ದೀರಿ

ಶ್ರೀ ಆರ್. ಗುಂಡೂರಾವ್ — ಹಾವನೂರ್ ವರದಿಯಲ್ಲಿ ಎಲ್ಲವೂ ಅಡಕವಾಗಿಲ್ಲ; ಬಿಟ್ಟು ಹೋಗಿವೆ. ಮಾನ್ಯ ಹಾವನೂರ್‌ರವರು ರಾಜ್ಯದಲ್ಲಿ ಎಲ್ಲವನ್ನೂ ಪೂರ್ತಿಯಾಗಿ ನೋಡಿ ಮಾಡಿದ್ದಾರೆಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. There are a number of communities left out in that Report. 'Urs" Community was considered as a backward community, but the High Court struck down the same saying that 'Urs' community is not backward community. ಆ ರೀತಿ ಸಂದರ್ಭಕ್ಕೆ ತಕ್ಕಂತೆ ಬ್ಯಾಕ್‌ವರ್ಡ್ ಅಲ್ಲದೇ ಇರುವವರನ್ನು ಬ್ಯಾಕ್‌ವರ್ಡ್ ಎಂದು ಸೇರಿಸಿಕೊಂಡಿರಬಹುದು. ಆದ್ದರಿಂದ, we are still at it and the Government will reconsider to include more communities as backward wherever backward people are there and give them more facilities. Definitely, the Government will constitute a committee at departmental or Legislature level to rectify the lapses. Wherever the backward communities are left out, the Government is very eager to see that such communities are brought under one fold.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ರಾಯಭಾಗ್ ತಾಲ್ಲೂಕಿನಲ್ಲಿರತಕ್ಕ ಹರಿಜನರ ಕೊರಳಿನಲ್ಲಿ ಲಿಂಗ ಇದೆ, ಇವರು ಲಿಂಗ ಪೂಜೆ ಮಾಡದೆ ಊಟ ಮಾಡುವುದಿಲ್ಲ ನೀವು ಜಾತಿ ಮೇಲೆ ಏನು ಮಾಡುವುದಕ್ಕೆ ಬರುವುದಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಸಂಪೂರ್ಣವಾಗಿ ಜೀರೋ ಆಗಿದೆ. ಹಾವನೂರ್ ಕಮೀಷನ್ ರಿಪೋರ್ಟ್‌ನ್ನು ಮತ್ತೊಮ್ಮೆ ಪುನರಾಲೋಚನೆ ಮಾಡಿ, ಆರ್ಥಿಕ ಬೇಸಿಸ್ ಮೇಲೆ ಅನುಕೂಲ ಒದಗಿಸುವ ವ್ಯವಸ್ಥೆ ಮಾಡಬೇಕು. ಫ್ಯಾಮಿಲಿ ಪ್ಲಾನಿಂಗ್ ಸರಿಯಾದ ರೀತಿಯಲ್ಲಿ ಜಾರಿಗೆ ತರದೇ ಹೋದರೆ ರಾಷ್ಟ್ರ ಉಳಿಯುವುದಿಲ್ಲ; ರಾಜ್ಯದ ಪ್ರಶ್ನೆ ಇಲ್ಲಿ ಮುಖ್ಯವಲ್ಲ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಬೊಮ್ಮಾಯಿಯವರು ಕೇಳಿರತಕ್ಕ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. Even now I will say a Committee can be constituted among the legislators of both the Houses. They can go in detail and submit a report to the Government within three months so that the Government can implement the recommendations of the Committee.

ಶ್ರೀ ಕೆ. ಪಾದೇಗೌಡ.—ನಮ್ಮ ರಾಜ್ಯದಲ್ಲಿ, ತಾತಾ ಮುತ್ತಾತರ ಕಾಲದಿಂದಲೂ ಮುಂದುವರಿದ ಜಾತಿ ಹೆಸರಿನಲ್ಲಿ ಸವಲತ್ತುಗಳನ್ನು ಅನುಭವಿಸಿಕೊಂಡು ಬಂದಿದ್ದಾರೆ. ಆ ಜಾತಿಯಲ್ಲಿಯೂ ಕೂಡ ನೂರಾರು ವರ್ಷಗಳ ಕಾಲ ಹಿಂದುಳಿದ ಜಾತಿ ಇದೆ. ಹೀಗೆ ಹಿಂದುಳಿದಿರುವಂಥ ಜಾತಿಗೆ ಇದುವರೆವಿಗೂ ಮುಂದುವರಿದ ಜಾತಿಯ ಹೆಸರಿನಲ್ಲಿ ಏನು ಸುಖವನ್ನು ಅನುಭವಿಸಿಕೊಂಡು ಬಂದಿದ್ದಾರೆ; ಅವರಿಂದ ಬೇರ್ಪಡಿಸಿ ಹಿಂದುಳಿದಿರತಕ್ಕಂಥವರಿಗೆ ಸವಲತ್ತುಗಳನ್ನು ಕೊಡುವುದಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೆ?

ಶ್ರೀ ಆರ್ ಗುಂಡೂರಾವ್.—ಸಮಿತಿ ರಚನೆ ಮಾಡಿದ ಮೇಲೆ; ಆ ಜನಾಂಗದವರು ನಾವು ಹಿಂದುಳಿದವರು ಎಂದು ಹೇಳಿಕೊಂಡರೆ. ಸರ್ಕಾರ ಕನ್ಸಿಡರ್ ಮಾಡುತ್ತದೆ.

ಅಧ್ಯಕ್ಷರು.—ದೊಡ್ಡ ಮೀನು ಸಣ್ಣ ಮೀನು ನುಂಗಿದ ಹಾಗೆ.

SRI PRABHAKAR TELKAR.—To my question 479 (8) 'whether the G.O. is also implemented in respect of appointments in private institutions, schools, colleges and other industrial establishments?' you

have said 'No'. My request is there are so many private schools and colleges where the Government aid is given. Wherever such aids are given .....ಅಂಥ ಜಾಗದಲ್ಲಿ ಅಂಥ ಸ್ಕೂಲಿನಲ್ಲಿ ಜಿ.ಓ. ಇಂಪ್ಲಿಮೆಂಟ್ ಆಗುವದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮುಖ್ಯ ಮಂತ್ರಿಯವರನ್ನು ಕೇಳುತ್ತೇನೆ.

SRI R. GUNDU RAO. - That is correct. I fully agree with the hon. member. Wherever the Government aided institutions are there, definitely the order will be in force and they to implement it. And wherever the minority institutions and religious institutions are there, of course this order will not be applicable.

ಶ್ರೀ ಎಸ್. ಆರ್. ಬೊಮ್ಮಾಯಿ: ಶಾಸನ ಸಮಿತಿ ರಚನೆ ಮಾಡುತ್ತೇನೆಂದು ಹೇಳಿದಿರಿ, ಬಹಳ ಸಂತೋಷ, ಈ ಅಧಿವೇಶನ ಮುಗಿಯುವುದರೊಳಗೆ ಮಾಡುತ್ತೀರಾ ?

SRI R. GUNDU RAO, I will do it tomorrow only.

Saw Pit License to Agriculturists.

680. SRI B. A. MOHIDEEN (Bhantwal).—Will the Chief Minister be pleased to state.

(a) whether the Government is aware that the Agriculturists are put to lot of inconveniences due to the imposition of Saw-Pit license to saw the timber for Agricultural Purposes ;

(b) whether the Government is thinking of relaxing the rules in the case of Saw Pit license ?

SRI R. GUNDU RAO (Chief Minister).—

(a) No such inconvenience is caused to the agriculturists. Under Rule 163 (1) of Karnataka Forest Rules 1969. No saw pit or any other hand sawing contrivence for cutting or converting timber shall be established within the limits of any Reserve Forest, Projected Forest or District Forest or within 2 Kilometres of such limits or within the areas specified below without obtaining a license from the concerned Range Forest Officer : (1) Shimoga District (2) Chickmangalure District (3) Coorg District (4) Dakshina Kannada District (5) Uttar Kannada District (6) Hassan District excluding Channarayapatna and Holenarasipura Taluks (7) Khanapura Taluk of Belgaum District (8) Kalghatgi, Hangal, Shiggaon and Dharwar Taluks of Dharwar Districts (9) Sandur and Kudligi Taluks of Bellary Districts '10) Chincholi Taluk of Gulbarga District. There is no such restruction in the areas other than the above areas.

(b) This restruction has been imposed with a view to prevent illicit sawing of timber and hence it is not considered necessary to relax these rules.